ಸುಪುತ್ರಿಗೆ ಅಜ್ಜನ ಮನೆ ಖಾಯಂ ಆಯ್ತು. ಅವರ ಅಂಗೈಯಲ್ಲಾಡುವ ಅರಗಿಣಿಯಾಗಿ ಬಾಲೆ ದಿನಕ್ಕೊಂದು ಚಂದದಿಂದ ಬೆಳೆಯುತ್ತಾ ಬಂದಳು.

ಹಳೆಯ ನೆನಪುಗಳಲ್ಲಿ ಕಳೆದು ಹೋಗಿ ಮುಂಚೇಕಡೆಯ ಮೆಟ್ಟಿಲ ಮೇಲೆ ಆ ಅಪರಾತ್ರಿಯಲ್ಲಿ ಭೂತದಂತೆ ಒಂಟಿಯಾಗಿ ಕೂತಿದ್ದ ರಾಮಚಂದ್ರ ಕಾಣದೆ ಇರುವೆ ಹಿಂಡಿನ ಮೇಲೆ ಕಾಲಿಟ್ಟವರು ಕಾಲು ತುಂಬಾ ಏರಿ ಬರುತ್ತಿದ್ದ ಇರುವೆಗಳನ್ನು ಕೊಡಕಿಕೊಳ್ಳಲು ಥಕಥೈ ಕುಣಿದಾಡುವಂತೆ ಸುಕಾಸುಮ್ಮನೆ ಮೈ ಅಲುಗಿಸಿದ. ಸಾಲು ಹಿಡಿದು ಶಿಸ್ತಿನ ಸಿಪಾಯಿಗಳಂತೆ ಹೋಗುತ್ತಿರುವ ಕಟ್ಟಿರುವೆ ಸಾಲಿನ ಮಧ್ಯೆ ಒಂದು ಕಡ್ಡಿ ಹಿಡಿದು ಸಾಲು ಚೆದುರಿಸುವ ಕಿತಾಪತಿ ಮಾಡುತ್ತಿದ್ದ ಸಣ್ಣ ವಯಸ್ಸಿನ ಚೇಷ್ಟೆ ನೆನಪಾಯ್ತು. ದೇವರಂತಾ ದೇವರಿಗೂ ಕೆಲವೊಮ್ಮೆ ಇಂತಾ ಬಾಲ್ಯಸಹಜ ಕಿತಾಪತಿ ಮಾಡಿ ಚಂದ ನೋಡುವ ಉಮೇದು ಬಂದುಬಿಡುತ್ತದೆಯಾ? ಅವನ ಮಟ್ಟಿಗೆ, ಅವನು ಇರುವುದೇ ಹೌದು ಎಂದು ಒಪ್ಪಿಕೊಂಡರೆ, ಹೇಗೋ ಒಂದು ಲಯದಲ್ಲಿ ಸಾಗುತ್ತಿರುವ ಮಾನವ ಮಾತ್ರರ ಬದುಕಿನಲ್ಲಿ ಕಡ್ಡಿ ಆಡಿಸಿ ಲಯ ತಪ್ಪಿಸುವುದು ಅವನ ಲೀಲೆ ಎನ್ನಬಹುದೇ? ಹೌದು ಎಂದಾದರೆ ಇದಕ್ಕಿಂತಾ ದೊಡ್ಡ ದುಷ್ಟತನ ಮತ್ತೇನಿದೆ? ಹೀಗೆ ಖುಷಿ ಬಂದಂತೆ ಮನುಷ್ಯರ ಬದುಕನ್ನು ನಿಯಂತ್ರಿಸ ಬಯಸುವ ಅವನು ದೇವರು ಹೇಗಾದಾನು? ಎಲ್ಲಾ ಪೂರ್ವಾರ್ಜಿತ ಕರ್ಮ, ಕಟ್ಟಿಕೊಂಡು ತಂದ ಬುತ್ತಿ ತಿಂದು ಮುಗಿಸಬೇಕು ಅನ್ನುತ್ತಿರುತ್ತಿದ್ದಳು ಅಮ್ಮ. ಪೂರ್ವಾರ್ಜಿತ ಕರ್ಮವನ್ನು ಅನುಭವಿಸಲು ಈ ಜನ್ಮ ಅಂತಾದರೆ ಈ ಜನ್ಮದಲ್ಲಿ ಮಾಡಿದ್ದನ್ನು ಅನುಭವಿಸಲು ಮುಂದಿನ ಜನ್ಮ? ಹೀಗೆ ಪಾಪಶೇಷ ಕರಗಿಸಲು ಜನ್ಮ ಎತ್ತುತ್ತಲೇ ಹೋಗುವುದಾ? ಅಥವಾ ಈ ಜನ್ಮದಲ್ಲಿ ಬುದ್ಧಿಪೂರ್ವಕವಾಗಿ ತಪ್ಪೆಸಗದೆ ಪಾಪದ ಇಡುಗಂಟನ್ನು ಕರಗಿಸಿಕೊಳ್ಳಬೇಕು ಎನ್ನುವುದು ದೇವರ ಇಚ್ಛೆಯಾಗಿರುತ್ತದೆಯಾ? ಸಮಯ, ಸಂದರ್ಭ, ಸನ್ನಿವೇಶಗಳಿಗೆ ಒಳಗಾಗಿ ಮನುಷ್ಯ ತಪ್ಪು ಮಾಡಿದಲ್ಲಿ, ಆ ತಪ್ಪು ಕ್ಷಮಾರ್ಹ ಎನ್ನುವ ಪಟ್ಟಿಗೆ ಸೇರಿಸಬಹುದಾದಲ್ಲಿ, ಪಾಪ ಯಾವುದು? ಪುಣ್ಯ ಯಾವುದು?

ಉಗುಳು ನುಂಗಿಕೊಂಡ ರಾಮಚಂದ್ರ. ಹಣೆಯ ಮೇಲೆ ಜಿನುಗಿದ ಬೆವರನ್ನು ಹೆಗಲ ವಸ್ತ್ರದಿಂದ ವರೆಸಿಕೊಂಡ. ಹೊರಗಿನ ಗಾಳಿಯಲ್ಲಿ ತಣ್ಪು ಸುರಿಯುವಂತಿದ್ದರೂ ಒಳಗಿಂದ ಹುಟ್ಟಿಕೊಂಡು ಬರುತ್ತಿದೆ ಧಗೆ. ರಾಮಚಂದ್ರ ಬುದ್ಧಿಪೂರ್ವಕವಾಗಿ ಹಳೆಯ ನೆನಪುಗಳನ್ನು ದೂರ ಸರಿಸಲೆತ್ನಿಸಿದರೂ ಇವತ್ತು ಆ ಪ್ರಯತ್ನಕ್ಕೆ ಗೆಲುವು ದೊರೆಯುತ್ತಿಲ್ಲ. ಕಲ್ಲೆಸೆದ ಜೇನುಗೂಡಿನಿಂದ ಜೇನ್ನೊಣಗಳು ಜುಂಯ್ಗುಟ್ಟಿ ಹಾರಿ ಬಂದು ಮುತ್ತಿಕೊಳ್ಳುವಂತೆ ಮುತ್ತಿಕೊಳ್ಳುತ್ತಿವೆ ನೆನಪುಗಳ ಸಂತೆ. ಕಚ್ಚುತ್ತಿವೆ, ಅಂಬು ಚುಚ್ಚುತ್ತಿವೆ, ನರಳಿಸುತ್ತಿವೆ, ಕೊಲ್ಲುವಂತೆ ಕಾಡುತ್ತಿವೆ..

* * *

ಎರಡನೆ ಮಗುವಿನ ನಿರೀಕ್ಷೆಯಲ್ಲಿ..

ಎಲ್ಲಾ ಸುಖವಾಗಿದ್ದರು. ಸಂತೋಷವಾಗಿದ್ದರು. ನೆಮ್ಮದಿಯಿಂದಿದ್ದರು ಎನ್ನುವಂತಾ ಉತ್ಪ್ರೇಕ್ಷೆಭರಿತ ಮಾತುಗಳಿಂದ ಅಂತ್ಯವಾಗಲು ಬದುಕು ಅನ್ನುವುದು ಕತೆಯೇ? ಕಾದಂಬರಿಯೇ? ಸಿನಿಮಾ, ನಾಟಕ ಯಾವುದೂ ಅಲ್ಲ. ಈಗಿದ್ದಿದ್ದು ಇನ್ನೊಂದು ಕ್ಷಣಕ್ಕೆ ಬದಲಾಗಬಹುದಾದ, ಊಹಿಸಲೂ ಅಸಾಧ್ಯವಾಗುವಂತೆ ದಿಕ್ಕೆಡಿಸಬಹುದಾದ, ಬದುಕೆಂಬ ಅನೂಹ್ಯದ ಕುರಿತಾದ ತಿಳಿವಳಿಕೆ ಹುಲುಮನುಜರಾದವರಿಗೆ ಹೇಗೆ ಗೊತ್ತಿರಲು ಸಾಧ್ಯ?

ಮತ್ತೊಮ್ಮೆ ಬಸುರಿಯಾದಳು ನಾಗಶ್ರೀ. ಈ ಸಲ ಆಕಸ್ಮಿಕವಾಗಿಯಲ್ಲ, ಉದ್ದೇಶಪೂರ್ವಕವಾಗಿ. ಆಗಲಿ ಇನ್ನೊಂದು ಮಗು. ನಂತರ ಕೈದು ಮಾಡಿಕೊಳ್ಳೋಣ. ಹೆಣ್ಣೋ, ಗಂಡೋ, ಇನ್ನೊಂದೇ.. ಎಂದು ದಂಪತಿ ತೀರ್ಮಾನಿಸಿದ್ದರು.

ಗಂಡೇ ಆಗುತ್ತೆ, ನೋಡ್ತಿರಿ.. ಅಂದಿದ್ದರು ರಾಧಮ್ಮ, ಬಸುರಿ ಯುವತಿಯ ಬಣ್ಣ, ಆಕಾರ ಇತ್ಯಾದಿಗಳನ್ನು ಆಧರಿಸಿ. ಮಗ ಹುಟ್ಟಿದರೆ ತನಗಿಂತಾ ಹೆಚ್ಚು ತನ್ನಪ್ಪ, ಅಮ್ಮ ಸಂಭ್ರಮಿಸುತ್ತಾರೆಂದು ನಾಗಶ್ರೀಗೆ ಗೊತ್ತಿದೆ. ಬೆಳಗಾಗುತ್ತಿದ್ದಂತೆ ಅತ್ತೆ ಕುಡಿಯಲು ಕೇಸರಿ ಎಳೆ ಬೆರೆಸಿದ ಹಿತೋಷ್ಣದ ಹಾಲು ಕೊಡುತ್ತಾ ಉಪಚಾರ ಮಾಡುತ್ತಿದ್ದರೆ ಅವಳು ಸಗರ್ವದಿಂದ ಅದನ್ನು ಸ್ವೀಕರಿಸುತ್ತಾ,

'ಏನಾರೂ ತಿನ್ಬೇಕು ಅನ್ಸಿದ್ರೆ ಬಾಯ್ಬಿಟ್ಟು ಹೇಳೇ. ಬಯಕೆ ತೀರಿಸ್ದಿದ್ರೆ ಹುಟ್ಟೋ ಮಗೀಗೆ ಕಿವಿ ಸೋರುತ್ತಂತೆ..' ಭವಾನಿ ಎನ್ನುವ, ಒಡಹುಟ್ಟಿದ ಅಕ್ಕನಿಗಿಂತಾ ಹೆಚ್ಚು ಆಪ್ತೆಯಾಗಿದ್ದ ವಾರಗಿತ್ತಿ ನಾಗಶ್ರೀಯನ್ನು ವಿಚಾರಿಸಿಕೊಳ್ಳುತ್ತಿದ್ದಳು. ನಾಗಶ್ರೀ ಕೂಡಾ ಮುಲಾಜಿಲ್ಲದೆ ತನಗೆ ತಿನ್ನಬೇಕೆನಿಸಿದ್ದನ್ನು ಕೇಳಿ ತರಿಸಿಕೊಳ್ಳುತ್ತಾ, ಮನೆಯಲ್ಲಿ ಮಾಡಿಸಿಕೊಳ್ಳುತ್ತಾ, ಗಂಡ ಅನ್ನುವ ಪ್ರಾಣಿಯನ್ನಂತೂ ತನ್ನ ಸೇವೆ ಮಾಡುವುದಕ್ಕಿರುವ ಪುಗಸಟ್ಟೆ ಆಳು ಎನ್ನುವಂತೆ ದುಡಿಸಿಕೊಳ್ಳುತ್ತಿದ್ದಳು. ಅವಳ ಬೇಡಿಕೆ ಎಂಬುದು ರಾಮಚಂದ್ರನಿಗೆ ಅವಳ ಬಾಯಿಯಿಂದ ಉದುರುತ್ತಿರುವ ಮುತ್ತು ಎಂಬಷ್ಟು ಅಮೂಲ್ಯವಾದದ್ದಾಗಿತ್ತು. ಅಟ್ಟ ಹತ್ತಿ ಕೂತ್ಗಂಬೇಡ್ವೇ, ಇಳಿಸೋಕೆ ಕಷ್ಟ ಆಗುತ್ತೆ ಎನ್ನುತ್ತೆನ್ನುತ್ತಲೇ ಮನೆಯವರು ಅವಳ ಸೇವೆಗೆ ಟೊಂಕ ಕಟ್ಟಿದ್ದರು. ಈ ಪರಿಯ ಅಕರಾಸ್ಥೆಯಿಂದ ಕೆಲವೊಮ್ಮೆ ಮುಜುಗರ ಅನಿಸುತ್ತಿದ್ದ ನಾಗಶ್ರೀ ವಾರಗಿತ್ತಿಯೊಡನೆ ಹೇಳುತ್ತಿದ್ದಳು,

'ನಾನು ಬಾಣಂತನ ಮುಗಿಸ್ಕಂಡು ಬರೋ ಹೊತ್ತಿಗೆ ನೀವು ರೆಡಿಯಾಗಿರ್ಬೇಕು ಅಕ್ಕಾ. ನಿಮ್ಮನ್ನ ಕೂರಿಸಿ ಉಪಚಾರ ಮಾಡ್ಬೇಕು ಅಂತ ಆಸೆ ಆಗ್ತಿದೆ ನಂಗೆ..'

'ಬ್ಯಾಡ ಮಾರಾಯ್ತೀ, ನಿಂಗಾದ್ರೆ ಎರಡಲ್ಲ, ನಾಕಾದ್ರೂ ಸಾಕೋ ಯೋಗ್ತಿ ಉಂಟು. ನಮಗೆ ಒಂದೇ ಸಾಕು..'

'ಒಳ್ಳು ಅನ್ನಿ. ನಿಮಗೆ ಇನ್ನೊಂದು ಹೆಣ್ಣು ಹುಟ್ಟುತ್ತೆ. ನೋಡ್ತಿರಿ ಬೇಕಾರೆ..'

'ಹೋಗೇ ಅಚೀಗೆ. ನಿಂಗೆ ಮಾಡೋಕೆ ಬೇರೆ ಕಸುಬಿಲ್ಲ ಅಂತ ನನ್ನ ಕೆಣಕೋಕೆ ಬರ್ಬೇಡ. ಒಂದ್ರಾಶಿ ಕೆಲಸ ಕಾದು ಬಿದ್ದಿದೆ ನಂಗೆ..'

ನಗು, ನಗು ಮತ್ತು ನಗು. ಸದ್ಯದಲ್ಲೇ ನಗುವೆಂಬ ವಸ್ತು ಈ ಮನೆಯಿಂದ ಶಾಶ್ವತವಾಗಿ ತಲೆಮರೆಸಿಕೊಂಡು ಹೋಗುತ್ತದೆಯೆಂದು ಯಾರು ಕಣಿ ಹೇಳಲು ಸಾಧ್ಯ ಇತ್ತು?

ನಿಟ್ಟುಸಿರುಗರೆಯುತ್ತಾ ಕೂತ ಭಂಗಿ ಬದಲಿಸಿದ ರಾಮಚಂದ್ರ. ಒಂದು ಹೊಡೆತ, ಎರಡು ತುಂಡು ಎನ್ನುವ ಮಾತಿದೆ. ಒಂದು ಹೊಡೆತಕ್ಕೆ ಮನೆಯ ನೆಮ್ಮದಿಯೆನ್ನುವುದು ಇನ್ನೆಂದೂ ಜೋಡಿಸಲಾಗದಂತೆ ಚಪ್ಪಂಚೂರಾಗುವ ಕುರಿತು ಯಾರು ಕಲ್ಪಿಸಿಕೊಂಡಿದ್ದರು?

ನಾಗಶ್ರೀ ಇನ್ನೇನು ತೌರುಮನೆಗೆ ಬಾಣಂತನಕ್ಕೆ ಹೋಗುವ ದಿನ ಸಮೀಪವಾಯ್ತು ಅನ್ನುವಷ್ಟರಲ್ಲಿ ಆ ಮನೆಯಲ್ಲಿ ಒಂದು ಅನಾಹುತ ಜರುಗಿತ್ತು. ಮುಂದಾಗುವುದರ ಮುನ್ಸೂಚನೆ? ಇದ್ದಿರಬಹುದು. ತೋಟ ಇಳಿಯುವ ತಗ್ಗಿನಲ್ಲಿದ್ದ ಮಾವಿನಮರ ಅಂದರೆ ಮಿಡಿ ಮಾವಿನಕಾಯಿಯ ಮರ ಎಂದೇ ಹೆಸರಿಗೆ ಹೋದದ್ದು. ತೊಟ್ಟು ಮುರಿದರೆ ಅಷ್ಟು ದೂರದವರೆಗೆ ಪಸರಿಸುತ್ತಿತ್ತು ಘಮ. ಕರ್ಪೂರದ ಸುವಾಸನೆ. ಉಪ್ಪಿನಕಾಯಿ ಹಾಕಿದರೆ ಎಷ್ಟೊರ್ಷ ಇಟ್ಟರೂ ಕಟ್ಟನೆ ಕಡಿಯಬಹುದಾದ ತಾಜಾತನ. ಜಡ ಬಿದ್ದು ಬಾಯಿ ಚಪ್ಪೆಯಾಗಿದೆ ಎಂದು ಉಪ್ಪಿನಕಾಯಿ ಕೇಳಿಕೊಂಡು ಬರುವ ಕೆಲಸದಾಳುಗಳಿಗಾಗಿಯೇ ಒಂದು ಜಾಡಿ ಉಪ್ಪಿನಕಾಯಿಯನ್ನು ಮೀಸಲಿಟ್ಟಿರುತ್ತಿದ್ದರು ರಾಧಮ್ಮ. ಮಾವಿನಮಿಡಿ ಹದವಾಗಿ ಬೆಳೆದಿದೆಯೆಂದು ಅಣ್ಣ ರಘುರಾಮ ಕಾಯಿ ಕೀಳಲು ತಾನೇ ಮರ ಹತ್ತಿ ಒಂದು ಕಿತಾಪತಿ ಮಾಡಿಕೊಂಡಿದ್ದ. ಸಣ್ಣವನಿದ್ದಾಗಿನಿಂದ ಅವನು ಹಾಗೇ ಎಂದು ಅವನ ಜಾತಕ ಬಿಚ್ಚಿಟ್ಟಿದ್ದರು ರಾಧಮ್ಮ. ಮರ ಹತ್ತುವುದು, ಕಾಯಿ ಕೆಡಗುವುದು, ಜೇನು ಕೀಳುವುದು, ಒಂದು ಕತ್ತಿ ಹಿಡಿದು ಸುಕಾಸುಮ್ಮನೆ ಕಾಲು ಶನಿ ಹಿಡಿದವರಂತೆ ಕಾನು ಸುತ್ತಿಕೊಂಡು ಬರುವುದು, ಇಂತಾದ್ದರಲ್ಲಿ ಅವನಿಗೆ ರುಚಿ ಜಾಸ್ತಿ. ಒಂದು ಗಳಿಗೆ ಕೂತಲ್ಲಿ ಕೂತಿರು ಅಂದರೆ ಅಸಾಧ್ಯ ಎನ್ನುವ ಜೀವ. ಮನೆಯಲ್ಲಿ ಆಳುಗಳಿರಲಿಲ್ಲವೇ? ಇದ್ದರು ಬೇಕಾದಷ್ಟು ಜನ. ಆದರೂ ದೊಡ್ಡಸ್ತಿಕೆ ತೋರಿಸಿಕೊಂಡು ತಾನೇ ಮರ ಹತ್ತಿ ಮಿಡಿ ಕುಯ್ಯಲು ಹೋಗಿ, ಅವನು ಮಿಡಿ ತುಂಬಿದ ಸಣ್ಣ ಪುಟ್ಟ ಕೊಂಬೆಗಳನ್ನು ಕಡಿದು ಕೆಳಗೆಸೆಯುತ್ತಿದ್ದರೆ ಅವು ನೆಲಕ್ಕೆ ಬಿದ್ದು ಜಜ್ಜಿ ಹಾಳಾಗದ ಹಾಗೆ ರಾಮಚಂದ್ರ ಆತುಕೊಳ್ಳುತ್ತಿದ್ದ. ಕಣ್ತಪ್ಪಿಸಿ ಮರದಲ್ಲಿ ಉಳಿದುಕೊಂಡಿರುತ್ತಿದ್ದ ಕಾಯಿಗಳು ಬೆಳೆದು ಕೆಳಗೆ ಉದುರುವಾಗ ಸೈತಾ ಮಧುರತೆ ಎನ್ನುವುದಿರದೆ ಹುಚ್ಚು ಹುಳಿಯ ರಸ ತುಂಬಿಕೊಂಡಿರುತ್ತಿದ್ದು ಈ ದಿಂಡಿನಕಾಯಿಗಳ ರಸಕ್ಕೆ ಜೀರಿಗೆ ಮೆಣಸು, ಇಂಗಿನ ಒಗ್ಗರಣೆ ಕೊಟ್ಟು, ಹದವಾಗಿ ಉಪ್ಪು ಸೇರಿಸಿದರೆ ಲೊಟ್ಟೆ ಹೊಡೆದುಕೊಂಡು ಸೇರಕ್ಕೆ ಅನ್ನ ಉಣ್ಣಬಹುದಾದ ರುಚಿ. ಮರದ ವೈವಿಧ್ಯಕ್ಕೆ ತಕ್ಕಂತೆ ದಿಂಡಿನಕಾಯಿಗಳಲ್ಲಿ ಅವುಗಳದ್ದೇ ಆದ ವಿಶೇಷದ ಘಮ. ಒಂದು ಚಂಚ ಕೊಬ್ಬರಿ ಎಣ್ಣೆಯ ಜೊತೆ ಕಲೆಸಿಕೊಂಡರಂತೂ..

(ಸಶೇಷ)